521
(B)

ಕರ್ನಾಟಕ ಲೋಕಾಯುಕ್ತ

ನಂ:ಕಂ.ಲೋಕ್.ಬಿಸಿಡಿ 2533/2017

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:06/10/2018

ನೋಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು ಚೊಕ್ಕಸಂದ್ರ ಸಂಬಂದಪಟ್ಟಂತೆ ದಿನಾಂಕ: **04-10-2018 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದಲ್ಲಿ ತಿಳಿಸಿರುವಂತೆ ವರದಿಯೊಂದಿಗೆ ದಿನಾಂಕ:11-12-2018 ರಂದು 3-00 ಗಂಟೆಗೆ ಗೌರವಾನ್ವಿತ ಲೋಕಾಯುಕ್ತರವರ ಮುಂದೆ ಹಾಜರಾಗತಕ್ಕದ್ದು.**

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ

9/10

ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

1) The C.E.O., Namma Bangalore foundation, 2nd floor, No54, Rockline centre, Richmond Road, Bangalore.

2) Sri. Jaganath, Deputy Conservator of Forest, BBMP, Bangalore

3) Sri. Manjunath, Director, Tank Development Authority

4) Sri. Nityanandakumar, I/c. Chief Engieneer, BWSSB,Bangalore

5) Sri. M.Devaraj, Additional Chief Engineer, BWSSB, Bangalore.

6) The Joint Commissioner, Solid Waste Management, BBMP, Bangalore

7) The Chief Engineer, Strom Water Drain, BBMP, Bangalore

8)The Commisisioner, BBMP, Bangalore.

## KARNATAKA LOKAYUKTA

No:Compt/LOK/BCD-2533/2018    Date:04-10-2018

## ORDER

Sri Jagannath, Deputy Conservator of Forest, BBMP, Bengaluru is present. Sri Manjunath, Director, Tank Development Authority is present. Sri Nityanandakumar, I/c Chief Engineer, BWSSB and Sri M.Devaraj, Additional Chief Engineer, BWSSB are also present.

2. Sri Jagannath has filed a status report dated 04-10-2018. Along with status report, he has produced photographs of the lake area depicting its status before cleaning, after cleaning and the present position of the lake after the water carrying sewage and garbage is discharged through the storm water drain to the lake. It is useful to extract the report, which reads as follows:

> "ವಿಷಯ: ಘನ ಲೋಕಾಯುಕ್ತರವರು ಪ್ರಕರಣ ಸಂಖ್ಯೆ: Compt/LOK/BCD/2182/ 2018/ARE-1 ರಲ್ಲಿನ ಚೊಕ್ಕಸಂದ್ರ/ದಾಸರಹಳ್ಳಿ ಕೆರೆಯ ವಿಚಾರಣೆಯ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು.

ಉಲ್ಲೇಖ: ಪ್ರಕರಣ ಸಂಖ್ಯೆ: Compt/LOK/BCD/2182/2018/ ARE-1 ರ ವಿಚಾರಣೆ ದಿನಾಂಕ: 05.09.2018.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ಸಲ್ಲಿಸುವುದೇನೆಂದರೆ, ಪ್ರಕರಣ ಸಂಖ್ಯೆ: Compt/LOK/BCD/2182/2018/ ARE-1 ರಲ್ಲಿ ಮಾನ್ಯ ಕರ್ನಾಟಕ ಲೋಕಾಯುಕ್ತ ರವರು ದಿನಾಂಕ: 05.09.2018 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಶದಲ್ಲಿರುವ ಚೊಕ್ಕಸಂದ್ರ ಕೆರೆಗೆ (ದಾಸರಹಳ್ಳಿ ಕೆರೆ) ಸಂಬಂಧಿಸಿದಂತೆ ವಿಚಾರಣೆ ನಡೆಸಿ ಆದೇಶ ಹೊರಡಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪಾಲಿಕೆಯ ಕೆರೆ ವಿಭಾಗದಿಂದ ಅನುಪಾಲನಾ ವರದಿಯನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

ಪಾಲಿಕೆಯ ದಾಸರಹಳ್ಳಿ ವಲಯದಲ್ಲಿರುವ ಚೊಕ್ಕಸಂದ್ರ ಕೆರೆಯು ಒಟ್ಟು 27 ಎಕರೆ 33 ಗುಂಟೆ ವಿಸ್ತೀರ್ಣವಿದ್ದು, ಚೊಕ್ಕಸಂದ್ರ ಗ್ರಾಮದ ಸರ್ವೆ ನಂ 5 ರಲ್ಲಿ 24 ಎಕರೆ 4 ಗುಂಟೆ ಹಾಗೂ ದಾಸರಹಳ್ಳಿ ಗ್ರಾಮದ ಸರ್ವೆ ನಂ 24 ರಲ್ಲಿ 3 ಎಕರೆ 29 ಗುಂಟೆ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ.

ದಾಸರಹಳ್ಳಿ ಕೆರೆಯನ್ನು ಪಾಲಿಕೆಯ ಕೆರೆ ವಿಭಾಗದಿಂದ 2012-13, 2013-14 ಮತ್ತು 2014-15 ನೇ ಸಾಲಿನಲ್ಲಿ ರೂ. 654.00 ಲಕ್ಷಗಳ ಮೊತ್ತವನ್ನು ವೆಚ್ಚ ಮಾಡಿ ಅಭಿವೃದ್ಧಿಪಡಿಸಿ, ಸಾರ್ವಜನಿಕರ ಉಪಯೋಗಕ್ಕೆ ತೆರೆದಿಡಲಾಗಿರುತ್ತದೆ.

ದಾಸರಹಳ್ಳಿ ಕೆರೆಗೆ ಪ್ರಮುಖವಾಗಿ ಕೆರೆಗೆ ಹರಿದು ಬರುವ 2 ರಾಜಕಾಲುವೆ ಮಾರ್ಗಗಳಿದ್ದು, ಈ ಎರಡೂ ರಾಜಕಾಲುವೆಗಳಲ್ಲಿ ಮಳೆ ನೀರು ಮತ್ತು ಕೊಳಚೆ ನೀರು ಹರಿದು ಬರುತ್ತಿರುತ್ತದೆ. ಈ ಮಾರ್ಗಗಳಲ್ಲಿ ಬರುವ ಕೊಳಚೆ ನೀರು ಕೆರೆಗೆ ಸೇರದಂತೆ ಸುರಕ್ಷಿತವಾಗಿ ಹೊರಹಾಕಲು ಕೊಳಚೆ ನೀರು ತಿರುವುಗಾಲುವೆ ನಿರ್ಮಿಸಲಾಗಿದ್ದು, ಈ ಮಾರ್ಗದಿಂದ ಕೊಳಚೆ ನೀರು ಕೆರೆಗೆ ಸೇರದಂತೆ ಕೆಳಗಿನ ಮಾರ್ಗದಲ್ಲಿ ಹರಿಯುವಂತೆ ವ್ಯವಸ್ಥೆ ಮಾಡಲಾಗಿದೆ.

ಮಳೆಗಾಲದಲ್ಲಿ ಮಾತ್ರ ಕೆರೆಗೆ ಕೇವಲ ಮಳೆ ನೀರು ಸೇರುವ ವ್ಯವಸ್ಥೆ ಮಾಡಲಾಗಿದ್ದು, ಹೆಚ್ಚುವರಿಯಾಗಿ 1.00 ಎಮ್.ಎಲ್.ಡಿ. ಸಾಮರ್ಥ್ಯದ ತೃತೀಯ ಸಂಸ್ಕರಣಾ ಮಟ್ಟದ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ರೂ. 427.46 ಲಕ್ಷಗಳ ವೆಚ್ಚದಲ್ಲಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಈ ಘಟಕದಿಂದ ಸಂಸ್ಕರಿಸಿದ ನೀರನ್ನು ಕೆರೆಗೆ ಹರಿದು ಬಿಡಲಾಗುತ್ತಿದೆ (ಛಾಯಾಚಿತ್ರಗಳನ್ನು ಸಲ್ಲಿಸಿದೆ).

ಕೆರೆಯ ಒಳಹರಿವಿನ ಮುಖಾಂತರ ಮಳೆಗಾಲದಲ್ಲಿ ಬರುವ ಮಳೆ ನೀರನ್ನು ಪ್ರಾರಂಭಿಕವಾಗಿ ವೆಟ್‌ಲ್ಯಾಂಡ್‌ನಲ್ಲಿ ಶೇಖರಿಸಿ, ತಿಳಿಗೊಂಡ ನಂತರ ಕೆರೆಗೆ ಹರಿದು ಬಿಡುವ ವ್ಯವಸ್ಥೆ ಮಾಡಲಾಗಿದ್ದು, ಯಾವುದೇ ನೀರು ನೇರವಾಗಿ ಕೆರೆಗೆ ಸೇರದಂತೆ ಕ್ರಮ ವಹಿಸಲಾಗಿದೆ (ಛಾಯಾಚಿತ್ರಗಳನ್ನು ಸಲ್ಲಿಸಿದೆ).

ಮಳೆಗಾಲದ ಅವಧಿಯಲ್ಲಿ ರಾಜಕಾಲುವೆಗಳ ಮುಖಾಂತರ ಗಣನೀಯ ಪ್ರಮಾಣದಲ್ಲಿ ತ್ಯಾಜ್ಯ ವಸ್ತುಗಳು ಮಳೆ ನೀರಿನೊಂದಿಗೆ ಹರಿದು ಬರುತ್ತಿದ್ದು, ಈ ತ್ಯಾಜ್ಯ ವಸ್ತುಗಳು ಕೆರೆಗೆ ಸೇರದಂತೆ ಒಳ ಹರಿವಿನ ಪ್ರದೇಶಗಳಿಗೆ ಕಬ್ಬಿಣದ ತಡೆಗೋಡೆಗಳನ್ನು

(Gratings) ಅಳವಡಿಸಿದ್ದು, ಈ ಪ್ರದೇಶಗಳಲ್ಲಿ ಮತ್ತು ವೆಟ್‌ಲ್ಯಾಂಡ್ ಪ್ರದೇಶದಲ್ಲಿ ಆಗಿಂದಾಗ್ಗೆ ಶೇಖರಣೆಯಾಗುವ ತ್ಯಾಜ್ಯಗಳನ್ನು ಹೊರತೆಗೆದು ಸೂಕ್ತ ಪ್ರದೇಶಗಳಿಗೆ ಸಾಗಾಣಿಕೆ ಮಾಡುವ ವ್ಯವಸ್ಥೆ ಮಾಡಲಾಗಿದೆ (ಛಾಯಾಚಿತ್ರಗಳನ್ನು ಸಲ್ಲಿಸಿದೆ).

ದಿನಾಂಕ: 5-9-2018 ರಿಂದ ಮೇಲಿನ ನಿರ್ವಹಣೆ ಕೆಲಸಗಳನ್ನು ಮೆ//ಯುನೈಟೆಡ್ ವೇ, ಬೆಂಗಳೂರು ರವರು ಪಾಲಿಕೆಯಿಂದ ಒಡಂಬಡಿಕೆ ಮುಖಾಂತರ ನಿರ್ವಹಿಸುತ್ತಿರುತ್ತಾರೆ (ಪ್ರತಿಯನ್ನು ಸಲ್ಲಿಸಿದೆ).

ಪ್ರಸ್ತುತ ಕೆರೆಗೆ ಯಾವುದೇ ಕೊಳಚೆ ನೀರು ಸೇರದಂತೆ ಹಾಗೂ ಕೇವಲ ಮಳೆ ನೀರು ಮಾತ್ರ ಕೆರೆ ಸೇರುವಂತೆ ಕ್ರಮ ವಹಿಸಲಾಗಿರುತ್ತದೆ. ಮತ್ತು ಈ ಅವಧಿಯಲ್ಲಿ ಆಗಿಂದಾಗ್ಗೆ ಒಳ ಹರಿವು ಮಾರ್ಗಗಳನ್ನು ಸ್ವಚ್ಛಗೊಳಿಸುವ ವ್ಯವಸ್ಥೆಯನ್ನು ಕೈಗೊಂಡು ಕೆರೆಯ ನೀರಿನ ಗುಣಮಟ್ಟವನ್ನು ಕಾಪಾಡುವ ಅಗತ್ಯ ಕ್ರಮ ವಹಿಸಲಾಗಿದೆ.

ಕೆರೆಯ ಸುತ್ತಮುತ್ತಲಿನ ನಾಗರೀಕರು ದೈನಂದಿನ ವಾಯು ವಿಹಾರಕ್ಕಾಗಿ ಕೆರೆಯನ್ನು ಉಪಯೋಗಿಸುತ್ತಿರುತ್ತಾರೆ.

ಸದರಿ ಕೆರೆಯ ನೀರಿನ ಗುಣಮಟ್ಟವನ್ನು ಈ ಹಿಂದೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಪರೀಕ್ಷಿಸಿದ್ದು, ಸದರಿ ವರದಿಯಲ್ಲಿ ದಾಸರಹಳ್ಳಿ ಕೆರೆಯ ನೀರಿನ ಗುಣಮಟ್ಟವನ್ನು 'ಡಿ' ವರ್ಗ ಎಂದು ದೃಢೀಕರಿಸಲಾಗಿದ್ದು, ಈ ಗುಣಮಟ್ಟವು ಕೆರೆಯಲ್ಲಿನ ಜಲಚರಗಳಿಗೆ ಯೋಗ್ಯವಾಗಿರುವುದಾಗಿ ಉಲ್ಲೇಖಿಸಿದ್ದು, ಸದರಿ ವರದಿಯನ್ನು ಮೇಲಿನ ವರದಿಯೊಂದಿಗೆ ತಮ್ಮ ಆದ್ಯ ಗಮನಕ್ಕೆ ಸಲ್ಲಿಸಿದೆ."

3. On behalf of BWSSB, a report dated 03-10-2018 is filed, the same reads as follows:

"ವಿಷಯ: ಚಿಕ್ಕಬಾಣಾವಾರ ಮತ್ತು ಚೊಕ್ಕಸಂದ್ರ ಕೆರೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾದ ಸ್ವಯಂಪ್ರೇರಿತ ದೂರಿನ ಕುರಿತು.

ಉಲ್ಲೇಖ:- ನಂ:ಕಂ.ಲೋಕ್.ಬಿ.ಸಿ.ಡಿ 2533/2018 ದಿನಾಂಕ: 25-09-2018.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರು ಹಾಗೂ ಸುರಕ್ಷಿತ ತ್ಯಾಜ್ಯ ನೀರು ನಿರ್ವಹಣೆಯ ಗುರುತರ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಮಾನ್ಯ ಲೋಕಾಯುಕ್ತರು ದಿನಾಂಕ:05-09-2018 ರ ಆದೇಶದಲ್ಲಿ ತಿಳಿಸಿರುವಂತೆ ಚಿಕ್ಕಬಾಣಾವಾರ ಕೆರೆಗೆ ತ್ಯಾಜ್ಯ ನೀರು ಹರಿಯುವುದನ್ನು ತಡೆಗಟ್ಟಲು ಬೆಂಗಳೂರು ಜಲಮಂಡಳಿಯು ಡಿಸೆಂಬರ್ 2017ರಲ್ಲಿ 5 ದಶಲಕ್ಷ ಲೀಟರ್ (ದ.ಲ.ಲೀ) ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ಚಿಕ್ಕಬಾಣಾವಾರದಲ್ಲಿ ಚಾಲನೆಗೊಳಿಸಿ ಚಿಕ್ಕಬಾಣಾವಾರ ಅಚ್ಚುಕಟ್ಟು ಪ್ರದೇಶಗಳಾದ ಕುವೆಂಪು ನಗರ,

ಸಿಂಗಪುರ, ವಿನಾಯಕ ನಗರ, ಅಬ್ಬಿಗೆರೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಶುದ್ಧೀಕರಿಸುವ ಯೋಜನೆಯಾಗಿರುತ್ತದೆ. ಪ್ರಸ್ತುತ 2 ರಿಂದ 2.5 ದ.ಲ.ಲೀ ದಿನಂಪ್ರತಿ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಚಿಕ್ಕಬಾಣಾವಾರ ಕೆರೆಗೆ ಹರಿಯಬಿಡಲಾಗುತ್ತಿದೆ ಹಾಗೂ ಚಿಕ್ಕಬಾಣಾವಾರ ಕೆರೆಯ ಅಚ್ಚುಕಟ್ಟು ಇತರ ಪ್ರದೇಶಗಳಾದ ಮೇಡರಹಳ್ಳಿ, ಶೆಟ್ಟಿಹಳ್ಳಿ, ಮಲ್ಲಸಂದ್ರ ಹಾಗೂ ಕಂಬಗೊಂಡನಹಳ್ಳಿ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಕೊಳಚೆನೀರನ್ನು ಶುದ್ಧೀಕರಿಸಲು ತ್ಯಾಜ್ಯ ನೀರನ್ನು ಮೇಡರಹಳ್ಳಿ ಖಖಿಕಖಿ ಮೂಲಕ ನಾಗಸಂದ್ರ ಶುದ್ಧೀಕರಣ ಘಟಕದಲ್ಲಿ ಶುದ್ಧೀಕರಿಸಲಾಗಿರುತ್ತದೆ. ಮುಂದುವರೆದಂತೆ, ಪ್ರಸ್ತುತ ಚಿಕ್ಕಬಾಣಾವಾರ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಂಗಳೂರು ಜಲಮಂಡಳಿಯು **110 ಹಳ್ಳಿಗಳ ಒಳಚರಂಡಿ ಯೋಜನೆಯ** ಅಡಿಯಲ್ಲಿ ತ್ಯಾಜ್ಯ ನೀರು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಕೈಗೊಂಡಿದ್ದು ಕಾಮಗಾರಿಗಳು ಸೆಪ್ಟೆಂಬರ್-2021ಕ್ಕೆ ಪೂರ್ಣಗೊಳ್ಳಲಿವೆ. ಈ ಕಾಮಗಾರಿಯು ಪೂರ್ಣಗೊಂಡ ನಂತರ 110 ಹಳ್ಳಿ ಪ್ರದೇಶಗಳಾದ ಅಬ್ಬಿಗೆರೆ, ಮೇಡರಹಳ್ಳಿ, ಚಿಕ್ಕಸಂದ್ರ, ಶೆಟ್ಟಿಹಳ್ಳಿ, ಸಿಡೇದಹಳ್ಳಿ ಪ್ರದೇಶದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ಕೆರೆಗೆ ಹರಿಯುತ್ತಿರುವುದನ್ನು ತಡೆಗಟ್ಟಿ, ಶುದ್ಧೀಕರಿಸಿ ಚಿಕ್ಕಬಾಣಾವಾರ ಕೆರೆಗೆ ಹರಿಯಬಿಡಲಾಗುವುದು.

ಮುಂದುವರೆದಂತೆ, ಚೊಕ್ಕಸಂದ್ರ ಕೆರೆಗೆ ಸಂಬಂಧಿಸಿದಂತೆ ಈ ಪ್ರದೇಶವು ಈ ಮೊದಲು ಹಳೇ ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿದ್ದು 2007ನೇ ಇಸವಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಚೊಕ್ಕಸಂದ್ರ ಕೆರೆ ಅಚ್ಚುಕಟ್ಟು ಪ್ರದೇಶಗಳಾದ ಪೀಣ್ಯ 2ನೇ ಹಂತ, 3ನೇ ಹಂತ, ಚೊಕ್ಕಸಂದ್ರ ಹಾಗೂ ಇನ್ನಿತರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ನಾಗಸಂದ್ರ ಬಳಿ ಇರುವ ದಿನಂಪ್ರತಿ 20 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಒಳಚರಂಡಿ ಕೊಳವೆಗಳನ್ನು ಅಳವಡಿಸಲಾಗಿರುತ್ತದೆ. ಪೀಣ್ಯ 1ನೇ ಹಂತ, ಸಿದ್ಧಾರ್ಥನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಕೊಂಡೊಯ್ಯಲು ಅಮೃತ್ ಯೋಜನೆಯಡಿಯಲ್ಲಿ ಕೊಳಚೆ ನೀರು ಕೊಳವೆಗಳನ್ನು ಅಳವಡಿಸುವ ಕಾಮಗಾರಿಯನ್ನು ಆರಂಭಿಸಲಾಗಿರುತ್ತದೆ ಹಾಗೂ ಈ ಕಾಮಗಾರಿಗಳನ್ನು ಜನವರಿ 2021ರೊಳಗೆ ಪೂರ್ಣಗೊಳಿಸಿ ತ್ಯಾಜ್ಯ ನೀರು ಚೊಕ್ಕಸಂದ್ರ ಕೆರೆಗೆ ಹರಿಯುವುದನ್ನು ತಡೆಗಟ್ಟಬಹುದಾಗಿರುತ್ತದೆ. ಕಾರ್ಖಾನೆಗಳ ತ್ಯಾಜ್ಯ ನೀರು ಚೊಕ್ಕಸಂದ್ರ ಕೆರೆಗೆ ಹರಿಯುವುದನ್ನು ತಪ್ಪಿಸುವ ಸಲುವಾಗಿ ಘನ ಸರ್ಕಾರವು ಪೀಣ್ಯ ಕೈಗಾರಿಕ ಪ್ರದೇಶ ವ್ಯಾಪ್ತಿಯಲ್ಲಿ ರಾಸಾಯನೀಕ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಸ್ಥಾಪಿಸಲು ಮಂಡಳಿಗೆ ನಿರ್ದೇಶನ ನೀಡಿರುತ್ತದೆ ಹಾಗೂ ಮಂಡಳಿಯು ಈ ವಿಷಯವಾಗಿ ಕಾರ್ಯೋನ್ಮುಕಗೊಂಡಿದ್ದು ಈ ಘಟಕದ ಕಾರ್ಯಾರಂಭದ ನಂತರ, ಕಾರ್ಖಾನೆಗಳ ತ್ಯಾಜ್ಯ ನೀರು ಕೆರೆಗೆ ಹರಿಯುವುದನ್ನು ತಡೆಗಟ್ಟಬಹುದಾಗಿದೆ ಎಂಬ ವಿಷಯವನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ."

4. In the light of the discussion that has taken place in the course of hearing of this proceedings,

I am of the view, it is desirable to issue the directions as herein below:

1. The Joint Commissioner, Solid Waste Management, BBMP to monitor the disposal of garbage in the storm water drain from the adjacent areas of Chokkasandra Lake. He is also directed to submit a status report with regard to the steps taken to monitor/prevent disposal of garbage to the lake.

2. The Chief Engineer, Storm Water Drain, BBMP is directed to keep the storm water drain cleaned periodically with a view to prevent discharge of effluent substance to the lake.

3. The Chief Engineer, BWSSB is also directed to take effective steps to prevent overflow of sewage and other effluent substance to the storm water drain.

5. It is desirable that the three authorities referred to above to convene a meeting and have a joint decision with regard to the steps required to be taken by each one of them either individually or

jointly with a view to prevent discharge of effluent substance to the lake.

6. As observed by me above, each one of them to submit their status report with regard to the steps taken by them within eight weeks from today.

7. Issue notice of this proceedings to (1) Joint Commissioner, Solid Waste Management, BBMP (2) The Chief Engineer, Storm Water Drain, BBMP and (3) The Chief Engineer, BWSSB.

Communicate this order to the Commissioner, BBMP and all other parties.

**List this matter on 11-12-2018 at 03.00 p.m.**

14/10/2018

(Justice P.Vishwanatha Shetty)
Lokayukta, State of Karnataka

ck*

ARE-1)